ಸಿ.ಸಿ .ನಂ. 96/2022 ಪಿಡಬ್ಲೂಃ 1

ದಿನಾಂಕಃ 12-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ನನ್ನ ಸಾಲದ ಅರ್ಜಿಯ ಫಾರ್ಮೆಟ್ ನಲ್ಲಿ ದಿನಾಂಕ ಎಂಬುವ ಕಾಲಂ ಕೂಡ ಇದೆ ಎಂದರೆ ಸರಿ . ನನ್ನ ಪ್ರಕಾರ ಈ ಸಾಲದ ಅರ್ಜಿ ಅಕ್ಟೋಬರ 2016 ರಲ್ಲಿ ನೀಡಿರುತ್ತಾರೆ, ದಿನಾಂಕ ನೆನಪಿಲ್ಲ. ಸಾಲದ ಅರ್ಜಿ ಕೊಟ್ಟಾಗ ಅವರ ವಾಸ್ತವ್ಯ ಖಚಿತ ಪಡಿಸಿಕೊಳ್ಳುವ ಸಲುವಾಗಿ ಅವರಿಂದ ಕೆವಾಯ್ ಸಿ ದಾಖಲಾತಿಗಳನ್ನು ಪಡೆದುಕೊಳ್ಳುತ್ತೇವೆ . ಈ ಸಾಲಗಾರರು ಬೇರೆ ಸಾಲಕ್ಕೆ ಜಾಮೀನುದಾರರಾಗಿದ್ದಾರೆ . ಆ ಸಾಲವನ್ನು ಯಾರು ಪಡೆದುಕೊಂಡಿದ್ದರು ಮತ್ತು ಯಾವ ಸಂದರ್ಭದಲ್ಲಿ ಪಡೆದುಕೊಂಡಿದ್ದರು ನೆನಪಿಲ್ಲ. ಈ ಪ್ರಕರಣದಲ್ಲಿ ಆರೋಪಿಗೆ ನೋಟಿಸನ್ನು ಕೊಟ್ಟಿದ್ದೇವೆ . ಪ್ರಕರಣವನ್ನು ದಾಖಲಿಸುವ ಸಂದರ್ಭದಲ್ಲಿ ವಕೀಲರಿಗೆ ಮಾಹಿತಿಯನ್ನು ಆ ಸಮಯದಲ್ಲಿ ಇರುವ ಮ್ಯಾನೇಜರ ಜೋಸೆಫ್ ವಾಸ್ ರವರು ಕೊಟ್ಟಿರುತ್ತಾರೆ. ಪ್ರಕರಣಕ್ಕೆ ಮಾಹಿತಿಯನ್ನು ಕೊಡಲು ಅವರಿಗೆ ಅಧಿಕಾರವನ್ನು ನೀಡಲಾಗಿತ್ತು. ಆ ರೀತಿ ಅಧಿಕಾರ ನೀಡಿದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಅಧಿಕಾರ ಪತ್ರ ಹಾಜರು ಪಡಿಸಿದ್ದೇವೆ ಎಂದು ನುಡಿದಿರುತ್ತಾರೆ . ಒಂದು ವೇಳೆ ಅಂತಹ ಅಧಿಕಾರ ಪತ್ರ ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದಲ್ಲಿ ಅಂತಹ ದಾಖಲಾತಿ ನಮ್ಮ ಬಳಿ ಇಲ್ಲ ಎಂದು ಅರ್ಥ ಎಂದರೆ ಸರಿ . ಸಾಕ್ಷಿಗೆ ಕೇಸಿನ ಕಡತವನ್ನು ನೋಡಿ ವಕೀಲರಿಗೆ ಕೊಟ್ಟಿದ್ದು ಇದೆ , ಕಡತದಲ್ಲಿ ಸಿಗುತ್ತಿಲ್ಲ ಎಂದು ನುಡಿದಿರುತ್ತಾರೆ. ಅಂತಹ ಯಾವುದೇ ದಾಖಲಾತಿ ಇಲ್ಲದ ಕಾರಣ ಅವರುಅದನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

4. ಈ ಪ್ರಕರಣದಲ್ಲಿಯ ನೋಟಿಸನ್ನು ಆರೋಪಿಗೆ ಅವರ ಯಾವ ವಿಳಾಸಕ್ಕೆ ಕಳಿಸಿದ್ದೇವೆ ನೆನಪಿಲ್ಲ . ಯಾವುದೇ ಒಬ್ಬ ವ್ಯಕ್ತಿಗೆ ಅಂಚೆ ಕಳುಹಿಸುವಾಗ ಆ ವ್ಯಕ್ತಿಯ ವಿಳಾಸ ಸ್ಪಷ್ಟವಾಗಿರಬೇಕು ,

ಗೊಂದಲಮಯವಾಗಿರಬಾರದು ಎಂದರೆ ಸರಿ . ಅದೇ ರೀತಿ ಅದರಲ್ಲಿ ಪಿನ್ ಕೋಡ್ ಕೂಡ ನಮೂದಿಸಬೇಕು ಎಂದರೆ ಸರಿ . ಎರಡು ಮೂರು ತಾಲುಕುಗಳ ಹೆಸರನ್ನು ಬರೆದರೆ ಅದನ್ನು ಜಾರಿ ಮಾಡುವುದು ಅಂಚೆ ಇಲಾಖೆಯವರಿಗೆ ಕಷ್ಟವಾಗುತ್ತದೆ ಎಂದರೆ ಸರಿ . ಯಾವ ವ್ಯಕ್ತಿಯ ವಿಳಾಸಕ್ಕೆ ಅಂಚೆಯನ್ನು ಕಳುಹಿಸಬೇಕು ಆ ವ್ಯಕ್ತಿಯ ನಿಖರವಾದ ವಿಳಾಸವನ್ನು ನಮೂದಿಸಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ನಿಖರವಾಗಿ ಯಾವ ವಿಳಾಸಕ್ಕೆ ಅಂಚೆ ಕಳಿಸಿದ್ದೇವೆ ನೆನಪಿಲ್ಲ . ಅದೇ ರೀತಿ ಯಾವ ಪಿನ್ ಕೋಡ್ ನ್ನು ನಮೂದು ಮಾಡಿದ್ದೇವೆ ನೆನಪಿಲ್ಲ . ನಾವು ಹಾಜರು ಪಡಿಸಿದ ಅಂಚೆ ಸ್ವೀಕೃತಿಯಲ್ಲಿ ರೇಲ್ವೆ ಇಲಾಖೆ, ಎಸ್ ಐ ಇ/ಪಿಡಬ್ಲೂಎ ವಾಯ್ ಇದು ರೇಲ್ವೆಯ ವಿಳಾಸ. ಅದರ ಮುಂದೆ ಧಾರವಾಡ ಎಂದು ಇದೆ . ಅದರ ಮುಂದೆ ನಮೂದಿಸಿರುವುದು ಸ್ಪಷ್ಟವಾಗಿ ತಿಳಿಯುವುದಿಲ್ಲ . ಚಂದಾವರ ಅದಕ್ಕಿಂತ ಪೂರ್ವದಲ್ಲಿ ಬರೆದಿರುವುದು ಓದಲು ಆಗುವುದಿಲ್ಲ. ಅದರ ನಂತರ ಚಂದಾವರ , ತಾಲೂಕು ಹೊನ್ನಾವರ ಎಂದು ಇದೆ ಎಂದರೆ ಸರಿ . ಧಾರವಾಡ ಬೇರೆ ಜಿಲ್ಲೆ, ಹೊನ್ನಾವರ ಬೇರೆ ಜಿಲ್ಲೆ ಎಂದರೆ ಸರಿ . ಎರಡು ವಿಳಾಸ ಇರುವುದು ಒಂದೇ ಸ್ವೀಕೃತಿಯಲ್ಲಿದೆ ಎಂದರೆ ಸರಿ . ಆ ಎರಡು ವಿಳಾಸಗಳಲ್ಲಿ ಯಾವ ವಿಳಾಸಕ್ಕೆ ಅಂಚೆ ಹೋಗಿದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ . ಗೊಂದಲಮಯ ವಿಳಾಸಕ್ಕೂ ಅಂಚೆ ಹೋಗಿದ್ದರಿಂದ ಅದು ಜಾರಿಯಾಗದೇ ವಾಪಸ್ಸು ಬಂದಿರುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ . ನಮ್ಮ ಪ್ರಕಾರ ನಾವು ಪಡೆದುಕೊಂಡಿರುವ ದಾಖಲಾತಿಯಲ್ಲಿ ಹೆಗಡೆ, ಕುಮಟಾ ಎನ್ನುವ ವಿಳಾಸ ಇದೆ . ಸಾಕ್ಷಿಗೆ ಆರೋಪಿಯ ಆಧಾರ ಕಾರ್ಡಿನ ಅಟೆಸ್ಟೆಡ್ ಪ್ರತಿಯನ್ನು ತೋರಿಸಲಾಗಿ ಸದರಿ ಆಧಾರ ಕಾರ್ಡಿನಲ್ಲಿ ಆರೋಪಿಯ ವಿಳಾಸ ವಿದ್ಯಾ ನಾಗೇಶ ಶೇಟ್, ಜಾನಮಕ್ಕಿ , ಹೆಗಡೆ, ಕುಮಟಾ ಎಂದು ಇದೆ ಎಂದರೆ ಸರಿ . ಅದೇ ರೀತಿ ಪಿನ್ ಕೋಡ 581330 ನಮೂದಾಗಿದೆ ಎಂದರೆ ಸರಿ . ಸಾಕ್ಷಿಗೆ ಇನ್ನೊಂದು ವೋಟರ ಐಡಿ ಅಟೆಸ್ಟೆಡ್ ಪ್ರತಿಯನ್ನು ತೋರಿಸಲಾಗಿ ಅದರಲ್ಲಿ ಆರೋಪಿಯ ಹೆಸರು ವಿದ್ಯಾ ಗಣಪತಿ ಶೆಟ್ಟಿ ಎಂದು ಇದೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಅದರಲ್ಲಿ ವಿಳಾಸ ಜಾನಮಕ್ಕಿ , ಕುಮಟಾ ತಾಲೂಕು ಉತ್ತರ ಕನ್ನಡ ಜಿಲ್ಲೆ ಎಂದು ನಮೂದು ಇದೆ ಎಂದರೆ ಸರಿ. ಆಧಾರ ಕಾರ್ಡನ್ನು ಯಾವ ದಿನಾಂಕಕ್ಕೆ ಕೊಟ್ಟಿದ್ದಾರೆ ಅದನ್ನು

ಆಧಾರ ಕಾರ್ಡನಲ್ಲಿ ಮೂದು ಮಾಡುತ್ತಾರೆ ಎಂದರೆ ಸರಿ . ಆ ಪ್ರಕಾರ ಆಧಾರ ಕಾರ್ಡನ್ನು ದಿಃ 12-12-2013 ರಂದು ಇಸ್ಸು ಮಾಡಲಾಗಿದೆ ಎಂದು ನಮೂದಿದೆ ಎಂದರೆ ಸರಿ . ಆಧಾರ ಕಾರ್ಡ ಹಾಗೂ ವೋಟರ ಐಡಿಯ ಅಟೆಸ್ಟೆಡ್ ಪ್ರತಿಗಳನ್ನು ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು. ಎಲೆಕ್ಷನ್ ಐಡಿಯಲ್ಲಿ ತೋರಿಸಿದ ಗಣಪತಿ ಶೆಟ್ಟಿ ಎಂದರೆ ಆರೋಪಿಯ ಪತಿಯ ಹೆಸರು ಎಂದರೆ ಸರಿ . ಒಂದು ಅಂಚೆ ನೋಟಿಸನ್ನು ಕಳುಹಿಸುವಾಗ ಅದಕ್ಕೆ ತಗಲುವ ವೆಚ್ಚವನ್ನು ಸರಿಯಾಗಿ ತುಂಬಬೇಕು ಇಲ್ಲದಿದ್ದರೆ ಅದು ಸರಿಯಾಗಿ ತಲುಪುವುದಿಲ್ಲ ಎಂದರೆ ಸಾಕ್ಷಿ ಅದು ಅಂಚೆ ಇಲಾಖೆಗೆ ಸಂಬಂಧಪಟ್ಟದ್ದು ಎಂದು ನುಡಿದಿರುತ್ತಾರೆ . ಮೊದಲಿರುವ ಮ್ಯಾನೇಜರ ಹೆಗಡೆ ವಿಳಾಸದ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಒಂದುವೇಳೆ ಜೋಸೆಫ್ ವಾಸ್ ರವರು ಹೆಗಡೆ ವಿಳಾಸಕ್ಕೆ ನೋಟಿಸನ್ನು ಕೊಟ್ಟಿದ್ದರೆ ಅಂತಹ ನೋಟಿಸು ಜಾರಿಯಾಗುತ್ತಿತ್ತು ಎಂದರೆ ಸರಿ . ಜೋಸೆಫ್ ವಾಸ್ ರವರಿಗೆ ಯಾವುದೇ ಅಧಿಕಾರ ಪತ್ರ ಇಲ್ಲದೇ ಇದ್ದರೂ ಕೂಡ ದಾಖಲಿಸಿದಂತಹ ಸುಳ್ಳು ಪ್ರಕರಣ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿಗೆ ನೋಟಿಸು ತಲುಪದ ಕಾರಣ ಈ ಪ್ರಕರಣವನ್ನು ದಾಖಲಿಸಲು ಬರುವುದಿಲ್ಲ ಎಂದರೆ ಸಾಕ್ಷಿ ನೋಟಿಸು ಜಾರಿಯಾಗಿದೆ ಎಂದು ನುಡಿದಿರುತ್ತಾರೆ .ಹೊನ್ನಾವರ ತಾಲೂಕಿನಲ್ಲಿ ಧಾರವಾಡ ಮುಗ್ದಾ ಸ್ಟೇಷನ್ ಅನ್ನುವಂತಹ ಯಾವುದೇ ರೇಲ್ವೆಸ್ಟೇಷನ್ ಇಲ್ಲ ಎಂದರೆ ಸರಿ . ಅದೇ ರೀತಿ ಧಾರವಾಡ ಜಿಲ್ಲೆಯಲ್ಲಿ ಚಂದಾವರ ಎನ್ನುವ ಊರಾಗಲೀ ಹೊನ್ನಾವರ ತಾಲೂಕಾಗಲೀ ಇಲ್ಲ ಎಂದರೆ ಸರಿ . ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ ಸುಳ್ಳು ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಈ ಪ್ರಕರಣದಲ್ಲಿ ಹಾಜರು ಪಡಿಸಿದ ಎಲ್ಲಾ ದಾಖಲಾತಿಗಳಿಗೆ ನನ್ನ ಸಮಕ್ಷಮದಲ್ಲಿ ಸಹಿ ಆಗಿಲ್ಲ ಎಂದರೆ ಸರಿ . ನನ್ನ ಸಮಕ್ಷಮದಲ್ಲಿ ಸಹಿ ಆಗಿದ್ದರೆ ಮಾತ್ರ ನಾನು ಅದು ಯಾರಿಗೆ ಸಂಬಂಧಪಟ್ಟಿದ್ದವು ಎಂದು ಹೇಳಬಹುದು ಎಂದರೆ ಸರಿಯಲ್ಲ . ನಿಪಿ-8 ರಲ್ಲಿ ಕೆಳಗಡೆ ಇರುವ ಎರಡು ಸಹಿಗಳು ಯಾರಿಗೆ ಸಂಬಂಧಪಟ್ಟಿವೆ ಗೊತ್ತಿಲ್ಲ . ನಿಪಿ-7 ರಲ್ಲಿರುವ ಎರಡು ಸಹಿಗಳು ಯಾರಿಗೆ ಸಂಬಂಧಪಟ್ಟಿವೆ ಎಂದು

ಹೇಳಲು ಬರುವುದಿಲ್ಲ ಎಂದರೆ ಸರಿ . ಆ ಸಹಿಯ ಕೆಳಗಡೆ ಜಾಮೀನುದಾರರು , ಅರ್ಜಿದಾರರು ಎಂದು ಬರೆದಿದ್ದರೆ ಮಾತ್ರ ಅದರ ಆಧಾರದ ಮೇಲೆ ಅವು ಯಾರ ಸಹಿ ಎಂದು ನಾನು ಹೇಳಬಹುದು ಎಂದರೆ ಸರಿ . ನಾನು ಸಹಿ ಗುರುತಿಸಲು ಯಾವುದೇ ಪರಿಣಿತಿ ಹೊಂದಿಲ್ಲ ಎಂದರೆ ಸರಿ . ನಿಪಿ-6 ರಲ್ಲಿರುವ ಯಾವುದೇ ಬರವಣಿಗೆ ನನ್ನ ಮುಂದೆ ಆಗಿಲ್ಲ ಎಂದರೆ ಸರಿ . ನಿಪಿ-2 ರಲ್ಲಿರುವ ಬರವಣಿಗೆ ನನ್ನ ಮುಂದೆ ಆಗಿಲ್ಲ ಎಂದರೆ ಸರಿ . ಎರಡು ದಾಖಲಾತಿಗಳ ಮೇಲೆ ಬರೆದಿರುವ ಬರವಣಿಗೆ ಯಾರದ್ದು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ . ನಿಪಿ-2 ಮತ್ತು ನಿಪಿ-6 ಆ ಎರಡು ದಾಖಲಾತಿಗಳಲ್ಲಿರುವ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ.

6. ನಾವು ಕಳುಹಿಸಿದ ನೋಟಿಸಿನಲ್ಲಿ ಯಾವುದೇ ತಿದ್ದುಪಡಿ ಮಾಡಿಲ್ಲ. ನ್ಯಾಯಾಲಯಕ್ಕೆ ಹಾಜರು ಪಡಿಸುವ ಸಂದರ್ಭದಲ್ಲಿ ಯಾವುದೇ ತಿದ್ದುಪಡಿ ಮಾಡಿಲ್ಲ. ಯಾವುದೇ ತಿದ್ದುಪಡಿ ಮಾಡಿದ್ದಲ್ಲಿ ತಿದ್ದುಪಡಿ ಮಾಡಿದ ವ್ಯಕ್ತಿ ತಮ್ಮ ಚಿಕ್ಕ ಸಹಿಯನ್ನು ಹಾಕಬೇಕಾಗುತ್ತದೆ ಎಂದರೆ ಸರಿ . ನಿಪಿ-4 ನೋಟಿಸಿನಲ್ಲಿ ಧಾರವಾಡ ಆದದ ನಂತರ ಮುಗೋಡ ಎಂಬುವಲ್ಲಿ ಒಂದು ತಿದ್ದುಪಡಿ ಹಾಗೂ ವಾಸ್ತವ್ಯ ಚಂದಾವರ , ಹೊನ್ನಾವರ ಎಂಬಲ್ಲಿ ಇನ್ನೊಂದು ತಿದ್ದು ಪಡಿ ಎರಡು ತಿದ್ದುಪಡಿ ಮಾಡಲಾಗಿದೆ ಎಂದರೆ ಸಾಕ್ಷಿ ಅದರಲ್ಲಿ ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ . ಅದನ್ನು ಯಾವಾಗ ತಿದ್ದುಪಡಿ ಮಾಡಲಾಗಿದೆ ಹೇಳಲು ಸಾಧ್ಯವಿಲ್ಲ ಹಾಗೂ ಯಾವ ಕಾರಣಕ್ಕೆ ತಿದ್ದುಪಡಿ ಮಾಡಲಾಗಿದೆ ಗೊತ್ತಿಲ್ಲ . ಆ ತಿದ್ದುಪಡಿಯನ್ನು ನಮ್ಮ ಸುಳ್ಳು ಪ್ರಕರಣಕ್ಕೆ ಅನುಕೂಲವಾಗಲೆಂದು ಮಾಡಿದ್ದೇವೆ ಎಂದರೆ ಸರಿಯಲ್ಲ.

7. ದಿಃ 18-01-2019 ಕ್ಕೆ ನಮಗೆ ನಿಖರವಾಗಿ ಎಷ್ಟು ಹಣ ಬರಬೇಕಿತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ನಮಗೆ ಆರೋಪಿ ಫಿರ್ಯಾದಿನಲ್ಲಿ ಹೇಳಿದಷ್ಟು ಹಣವನ್ನು ಕಾನೂನುಬದ್ಧವಾಗಿ ಕೊಡುವುದು ಇಲ್ಲ ಎಂದರೆ ಸರಿಯಲ್ಲ . ಆ ಕಾರಣಕ್ಕೆ ನಾವು ಅಂತಹ

ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ನಾನು ಮಾಡಿದಂತಹ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.